# ಕರ್ನಾಟಕ ವೈದ್ಯೋಪಚಾರ ಸಿಬ್ಬಂದಿಯ ಮೇಲೆ ಹಿಂಸಾಚಾರವನ್ನು ಮತ್ತು ವೈದ್ಯೋಪಚಾರ ಸಂಸ್ಥೆಗಳ ಆಸ್ತಿಗೆ ಹಾನಿ ಮಾಡುವುದನ್ನು ನಿಷೇಧಿಸುವ ಅಧಿನಿಯಮ, 2009

**ಪ್ರಕರಣಗಳ ಪಟ್ಟಿ**

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**ಪ್ರಕರಣಗಳು:**

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ
2. ಪರಿಭಾಷೆಗಳು
3. ಹಿಂಸೆಯ ನಿಷೇಧ
4. ದಂಡ
5. ಅಪರಾಧದ ಸಂಜ್ಞಾನ
6. ಆಸ್ತಿಗೆ ಉಂಟಾದ ಹಾನಿಯ ನಷ್ಟದ ವಸೂಲಿ
7. ಈ ಅಧಿನಿಯಮದ ಉಪಬಂಧಗಳು ಇತರ ಕಾನೂನುಗಳಿಗೆ ಹೆಚ್ಚುವರಿಯಾಗಿರತಕ್ಕದ್ದು

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ವೈದ್ಯೋಪಚಾರ ಸಿಬ್ಬಂದಿ ಮೇಲಿನ ಹಿಂಸೆ ಮತ್ತು ವೈದ್ಯೋಪಚಾರ ಸಂಸ್ಥೆಗಳಲ್ಲಿನ ಆಸ್ತಿಗೆ ಹಾನಿಯುಂಟು ಮಾಡುವುದನ್ನು ತಪ್ಪಿಸಲು ಕಾನೂನನ್ನು ಅಧಿನಿಯಮಿಸುವುದು ಅವಶ್ಯಕವಾಗಿದೆ ಎಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

[2009ರ ವಿಧಾನಸಭೆಯ ವಿಧೇಯಕ ಸಂಖ್ಯೆ: 3]

[ಭಾರತದ ಸಂವಿಧಾನದ ಏಳನೆಯ ಅನುಸೂಚಿಯ ಎರಡನೇ ಪಟ್ಟಿಯ 1 ಮತ್ತು 6ನೇ ನಮೂದನೆಯ ಅಡಿಯಲ್ಲಿ ಬರುತ್ತದೆ.]

**2009ರ ಕರ್ನಾಟಕ ಅಧಿನಿಯಮ ಸಂಖ್ಯೆ : 1**

**(2009ರ ಮಾರ್ಚ್ ಎರಡನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)**

**ಕರ್ನಾಟಕ ವೈದ್ಯೋಪಚಾರ ಸಿಬ್ಬಂದಿಯ ಮೇಲೆ ಹಿಂಸಾಚಾರವನ್ನು ಮತ್ತು ವೈದ್ಯೋಪಚಾರ ಸಂಸ್ಥೆಗಳ ಆಸ್ತಿಗೆ ಹಾನಿ ಮಾಡುವುದನ್ನು ನಿಷೇಧಿಸುವ ಅಧಿನಿಯಮ, 2009**

**(2009ರ ಫೆಬ್ರವರಿ ಇಪ್ಪತ್ತಾರನೇ ದಿನಾಂಕದಂದು ರಾಜ್ಯಪಾಲರ ಅನುಮೋದನೆಯನ್ನು ಪಡೆಯಲಾಗಿದೆ)**

ವೈದ್ಯೋಪಚಾರ ಸಿಬ್ಬಂದಿಯ ಮೇಲಿನ ಹಿಂಸಾಚಾರವನ್ನು ಮತ್ತು ವೈದ್ಯೋಪಚಾರ ಸಂಸ್ಥೆಗಳ ಆಸ್ತಿಗೆ ಹಾನಿ ಮಾಡುವುದನ್ನು ನಿಷೇಧಿಸುವ ಮತ್ತು ಅದಕ್ಕೆ ಸಂಬಂಧಿಸಿದ ಮತ್ತು ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗೆ ಉಪಬಂಧ ಕಲ್ಪಿಸುವ ಒಂದು ಅಧಿನಿಯಮ.

ವೈದ್ಯೋಪಚಾರ ಸಿಬ್ಬಂದಿಯ ಮೇಲೆ ಹಿಂಸಾಚಾರವನ್ನು ಮತ್ತು ವೈದ್ಯೋಪಚಾರ ಸಂಸ್ಥೆಗಳ ಆಸ್ತಿಗೆ ಹಾನಿ ಮಾಡುವುದನ್ನು ನಿಷೇಧಿಸುವುದು ಮತ್ತು ಅದಕ್ಕೆ ಸಂಬಂಧಿಸಿದ ಮತ್ತು ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗೆ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಐವತ್ತೊಂಬತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ವೈದ್ಯೋಪಚಾರ ಸಿಬ್ಬಂದಿಯ ಮೇಲೆ ಹಿಂಸಾಚಾರವನ್ನು ಮತ್ತು ವೈದ್ಯೋಪಚಾರ ಸಂಸ್ಥೆಗಳ ಆಸ್ತಿಗೆ ಹಾನಿ ಮಾಡುವುದನ್ನು ನಿಷೇಧಿಸುವ ಅಧಿನಿಯಮ, 2009 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ, ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯವಿದ್ದ ಹೊರತು,-

(ಎ) "ವೈದ್ಯೋಪಚಾರ ಸಂಸ್ಥೆಗಳು" ಎಂದರೆ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ ಅಥವಾ ಸ್ಥಳೀಯ ಸಂಸ್ಥೆಗಳು ಮುಂತಾದವುಗಳ ನಿಯಂತ್ರಣದಲ್ಲಿರುವ ಜನರಿಗೆ ವೈದ್ಯೋಪಚಾರ ಸೇವೆ ಒದಗಿಸುತ್ತಿರುವ ಎಲ್ಲಾ ಸಂಸ್ಥೆಗಳು ಮತ್ತು ಇದರಲ್ಲಿ ರೋಗಿಗಳ ಚಿಕಿತ್ಸೆಗೆ ಸೌಲಭ್ಯವುಳ್ಳ ಮತ್ತು ಅವರನ್ನು ಬರಮಾಡಿಕೊಳ್ಳುವುದಕ್ಕೆ ಅಥವಾ ಅವರ ವಾಸ್ತವ್ಯಕ್ಕೆ ಸೌಲಭ್ಯಗಳನ್ನುಳ್ಳ ಯಾವುದೇ ಖಾಸಗಿ ಆಸ್ಪತ್ರೆ, ಹೆರಿಗೆಗಾಗಿ ಮತ್ತು ಹೆರಿಗೆ ಸಂಬಂಧದಲ್ಲಿ ಗರ್ಭಿಣಿ ಹಾಗು ಬಾಣಂತನದ ಆರೈಕೆಗಾಗಿ ಅಥವಾ ಅದಕ್ಕೆ ಸಂಬಂಧಿಸಿದ ಇತರ ಯಾವುದೇ ಕಾರಣಕ್ಕಾಗಿ ಮಹಿಳೆಯರನ್ನು ವಾಡಿಕೆಯಾಗಿ ಬರಮಾಡಿಕೊಳ್ಳುವ ಮತ್ತು ದಾಖಲಿಸಿಕೊಳ್ಳುವ ಯಾವುದೇ ಖಾಸಗಿ ಪ್ರಸೂತಿ ಗೃಹ; ಮತ್ತು ದೇಹದ ಅಥವಾ ಮನಸ್ಸಿನ ಯಾವುದೇ ಖಾಯಿಲೆ, ಗಾಯ ಅಥವಾ ದುರ್ಬಲತೆಯಿಂದ ಬಳಲುತ್ತಿರುವ ವ್ಯಕ್ತಿಗಳ

ಉಪಚಾರ ಮತ್ತು ವಾಸ್ತವ್ಯಕ್ಕೆ ಬಳಸುವ ಅಥವಾ ಹಾಗೆ ಬಳಸುವ ಉದ್ದೇಶವುಳ್ಳ ಮತ್ತು ಚಿಕಿತ್ಸೆ ಅಥವಾ ಶುಶ್ರೂಷೆ ಒದಗಿಸುವ ಅಥವಾ ಅವರೆಡನ್ನೂ ಒದಗಿಸುವ ಯಾವುದೇ ಖಾಸಗಿ ನರ್ಸಿಂಗ್ ಹೋಮ್ ಒಳಗೊಳ್ಳುತ್ತವೆ ಮತ್ತು ಇದು ಪ್ರಸೂತಿಗೃಹ ಅಥವಾ ಆರೋಗ್ಯಧಾಮ ಮುಂತಾದುವುಗಳನ್ನೂ ಒಳಗೊಳ್ಳುತ್ತವೆ.

(ಬಿ) "ವೈದ್ಯೋಪಚಾರ ಸಂಸ್ಥೆಗೆ ಸಂಬಂಧಿಸಿದಂತೆ ವೈದ್ಯೋಪಚಾರ ಸಿಬ್ಬಂದಿ" ಎಂಬುದರಲ್ಲಿ,-

(i) ವೈದ್ಯೋಪಚಾರ ಸಂಸ್ಥೆಗಳಲ್ಲಿ (ತಾತ್ಕಾಲಿಕ ನೋಂದಣಿಯನ್ನು ಹೊಂದಿರುವವರೂ ಸೇರಿದಂತೆ) ಕಾರ್ಯನಿರ್ವಹಿಸುತ್ತಿರುವ ನೋಂದಾಯಿತ ವೈದ್ಯರು;

(ii) ನೋಂದಾಯಿತ ಶುಶ್ರೂಷಕಿಯರು;

(iii) ವೈದ್ಯ ವಿದ್ಯಾರ್ಥಿಗಳು;

(iv) ನರ್ಸಿಂಗ್ ವಿದ್ಯಾರ್ಥಿಗಳು;

(v) ವೈದ್ಯೋಪಚಾರ ಸಂಸ್ಥೆಗಳಲ್ಲಿ ನೇಮಿಸಲ್ಪಟ್ಟ ಮತ್ತು ಕಾರ್ಯನಿರ್ವಹಿಸುತ್ತಿರುವ ಅರೆ ವೈದ್ಯಕೀಯ ಕಾರ್ಯಕರ್ತರು;

(ಸಿ) "ಅಪರಾಧಿ" ಎಂದರೆ ಯಾವುದೇ ವ್ಯಕ್ತಿಯು ತಾನೊಬ್ಬನೇ ಅಥವಾ ವ್ಯಕ್ತಿಗಳ ಗುಂಪಿನ ಅಥವಾ ಸಂಘದ ಒಬ್ಬ ಸದಸ್ಯನಾಗಿ ಅಥವಾ ನಾಯಕನಾಗಿ ಈ ಅಧಿನಿಯಮದಡಿಯಲ್ಲಿ ಹಿಂಸಾಚಾರವನ್ನು ಮಾಡುವ ಅಥವಾ ಮಾಡುವುದಕ್ಕೆ ಪ್ರಯತ್ನಿಸುವ ಅಥವಾ ಮಾಡುವುದಕ್ಕೆ ದುಷ್ಪ್ರೇರಿಸುವ ಅಥವಾ ಪ್ರಚೋದಿಸುವ ಯಾವೊಬ್ಬ ವ್ಯಕ್ತಿ;

(ಡಿ) "ಹಿಂಸೆ" ಎಂದರೆ ವೈದ್ಯೋಪಚಾರ ಸಂಸ್ಥೆಯಲ್ಲಿ ಕಾರ್ಯವನ್ನು ನಿರ್ವಹಿಸುತ್ತಿರುವಾಗ ಯಾವೊಬ್ಬ ವೈದ್ಯೋಪಚಾರ ಸಿಬ್ಬಂದಿಗೆ ಯಾವುದೇ ಕೆಡಕು ಅಥವಾ ಗಾಯವುಂಟು ಮಾಡುವ, ಪ್ರಾಣಾಪಾಯ ಉಂಟುಮಾಡುವ ಅಥವಾ ಬೆದರಿಕೆ ಒಡ್ಡುವ, ಅಡ್ಡಿ ಉಂಟುಮಾಡುವ ಅಥವಾ ಆತಂಕವುಂಟು ಮಾಡುವ ಅಥವಾ ವೈದ್ಯೋಪಚಾರ ಸಂಸ್ಥೆಯಲ್ಲಿನ ಆಸ್ತಿಗೆ ಹಾನಿವುಂಟುಮಾಡುವ ಯಾವುವೇ ಚಟುವಟಿಕೆಗಳು;

**3. ಹಿಂಸೆಯ ನಿಷೇಧ.-** ವೈದ್ಯೋಪಚಾರ ಸಿಬ್ಬಂದಿಯ ಮೇಲೆ ಯಾವುದೇ ಹಿಂಸಾಚಾರ ಮಾಡುವುದನ್ನು ಅಥವಾ ವೈದ್ಯೋಪಚಾರ ಸಂಸ್ಥೆಯಲ್ಲಿನ ಆಸ್ತಿಗೆ ಹಾನಿ ಉಂಟುಮಾಡುವುದನ್ನು ನಿಷೇಧಿಸಲಾಗಿದೆ.

**4. ದಂಡ.-** 3ನೇ ಪ್ರಕರಣವನ್ನು ಉಲ್ಲಂಘಿಸುವ ಯಾವುದೇ ಕೃತ್ಯವನ್ನು ಮಾಡುವ ಯಾವೊಬ್ಬ ವ್ಯಕ್ತಿಯು ಮೂರು ವರ್ಷಗಳ ಅವಧಿಯ ಕಾರಾವಾಸದಿಂದ ಮತ್ತು ಐವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**5. ಅಪರಾಧದ ಸಂಜ್ಞಾನ.-** 3ನೇ ಪ್ರಕರಣವನ್ನು ಉಲ್ಲಂಘಿಸಿ ಮಾಡಲಾದ ಯಾವುದೇ ಅಪರಾಧವು ಸಂಜ್ಞೇಯ ಮತ್ತು ಜಾಮೀನೀಯವಲ್ಲದ್ದಾಗಿರತಕ್ಕದ್ದು.

**6. ಆಸ್ತಿಗೆ ಉಂಟಾದ ಹಾನಿಯ ನಷ್ಟದ ವಸೂಲಿ.–** (1) ಅಪರಾಧಿಯು 4ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ದಂಡನೆಗೆ ಗುರಿಯಾಗುವುದರ ಜೊತೆಗೆ, ಅಪರಾಧದ ಅಧಿವಿಚಾರಣೆ ಮಾಡುತ್ತಿರುವ ನ್ಯಾಯಾಲಯವು ನಿರ್ಧರಿಸಿದಂತೆ ಆಸ್ತಿಗೆ ಉಂಟಾದ ನಷ್ಟದ ಮತ್ತು ಹಾನಿಗೊಳಗಾದ ವೈದ್ಯಕೀಯ ಸಲಕರಣೆಯ ಖರೀದಿ ಬೆಲೆಯ ಎರಡರಷ್ಟು ಮೊತ್ತದ ದಂಡವನ್ನು ಸಂದಾಯ ಮಾಡಲು ಹೊಣೆಗಾರನಾಗತಕ್ಕದ್ದು.

(2) ಅಪರಾಧಿಯು (1)ನೇ ಉಪಪ್ರಕರಣದ ಅಡಿಯಲ್ಲಿ ದಂಡದ ಮೊತ್ತವನ್ನು ಸಂದಾಯ ಮಾಡದಿದ್ದಲ್ಲಿ, ಸದರಿ ಮೊತ್ತವನ್ನು, ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ (1964ರ ಕರ್ನಾಟಕ ಅಧಿನಿಯಮ 12) ಉಪಬಂಧಗಳ ಅಡಿಯಲ್ಲಿ ಭೂ ಕಂದಾಯದ ಬಾಕಿಯಂತೆ ವಸೂಲಿ ಮಾಡತಕ್ಕದ್ದು.

**7. ಈ ಅಧಿನಿಯಮದ ಉಪಬಂಧಗಳು ಇತರ ಕಾನೂನುಗಳಿಗೆ ಹೆಚ್ಚುವರಿಯಾಗಿರತಕ್ಕದ್ದು.–** ಈ ಅಧಿನಿಯಮದ ಉಪಬಂಧಗಳು, ಪ್ರಸ್ತುತ ಜಾರಿಯಲ್ಲಿರುವ, ಯಾವುದೇ ಇತರ ಕಾನೂನಿನ ಉಪಬಂಧಗಳಿಗೆ ಹೆಚ್ಚುವರಿಯಾಗಿರತಕ್ಕದ್ದೇ ಹೊರತು ಅವನ್ನು ನ್ಯೂನಗೊಳಿಸತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ
ಹೆಸರಿನಲ್ಲಿ,
**ಜಿ.ಕೆ. ಬೋರೇಗೌಡ**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ

**ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು.**